
ಕಲೆ: ಬಸವರಾಜ ಎನ್. ಕಲೆಗಾರ

## ನಾಂದಿಪದ

# ಹೊಸ ತಲೆಮಾರಿನ ಕಥನ

ಕನ್ನಡ ಸಣ್ಣಕಥೆಗಳ ಲೋಕಕ್ಕೀಗ ಮಗ್ಗುಲು ಬದಲಿಸುವ ಸಮಯ. ಸಣ್ಣಕಥೆಯ ಅಗಣಿತ ಸಾಧ್ಯತೆಗಳ ಹುಡುಕಾಟದಲ್ಲಿ ಅತ್ಯುತ್ತಮ ಕಥನ ಪರಂಪರೆಯೊಂದು ಕನ್ನಡದಲ್ಲಿ ರೂಪುಗೊಂಡಿದೆ. ಭಾರತದ ಯಾವುದೇ ಭಾಷೆಯ ಕಥೆಗಳಿಗೆ ಹೆಗಲೆಣೆಯಾದ, ವಿಶ್ವದ ಯಾವುದೇ ಭಾಷೆಯ ಅತ್ಯುತ್ತಮ ಕಥೆಗಳ ಸಾಲಿನಲ್ಲಿ ನಿಲ್ಲಬಲ್ಲ ರಚನೆಗಳು ಕನ್ನಡದಲ್ಲಿವೆ. ಈ ಪರಂಪರೆಯನ್ನು ನೆನಪಿನಲ್ಲಿರಿಸಿಕೊಂಡು, ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಣ್ಣಕಥೆಯ ಫಸಲು ಹೇಗಿದೆ? ಇತ್ತೀಚಿನ ಕಥೆಗಾರರ ಒಲವು ನಿಲುವುಗಳು ಯಾವುವು? ಕನ್ನಡದ ಕಥನ ಪರಂಪರೆಯಲ್ಲಿ ಹೊಸ ಕಥೆಗಾರರ ಸ್ಥಾನ ಯಾವುದು? ಎನ್ನುವಂಥ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕಾಗಿದೆ. ಇಂಥ ಪ್ರಶ್ನೆಗಳು ಎದುರಾದಾಗಲೆಲ್ಲ ಹೊಸ ತಲೆಮಾರಿನ ಕಥೆಗಾರರ ಬೆರಳು ವಿಮರ್ಶಕರತ್ತ ಹೊರಳುತ್ತದೆ. ಕನ್ನಡ ವಿಮರ್ಶೆಯ ಕಣ್ಣು ಹೊಸ ಬರಹಗಾರರತ್ತ ಹೊರಳುತ್ತಿಲ್ಲ ಎನ್ನುವ ದೂರಿನ ರೂಪದ ಅಳಲಿನೊಂದಿಗೆ, ಹೊಸ ತಲೆಮಾರಿನ ಕಥೆಗಳ ಜೊತೆಗೆ ಹೊಸ ವಿಮರ್ಶಕರು ರೂಪುಗೊಳ್ಳುತ್ತಿಲ್ಲ ಎನ್ನುವ ಅಭಿಪ್ರಾಯವೂ ಇದೆ. ಈ ಅಳಲು ಅನ್ನಿಸಿಕೆಗಳ ಜೊತೆಯಲ್ಲಿಯೇ, ಯಾವುದೇ ವಿಮರ್ಶಕ ಅಧೀರನಾಗುವಷ್ಟು ಗಾತ್ರದ ಸಾಹಿತ್ಯ ಕನ್ನಡದಲ್ಲಿ ರಚನೆಯಾಗುತ್ತಿರುವುದನ್ನು ಗಮನಿಸಬೇಕು. ಕೊರತೆ, ಬಿಕ್ಕಟ್ಟು, ಗೊಂದಲಗಳೇನೇ ಇರಲಿ, ಆಯಾ ಕಾಲದ ಸಾಹಿತ್ಯವನ್ನು ವಿಶ್ಲೇಷಿಸುವ ಕೆಲಸ ನಡೆಯಲೇಬೇಕು. ಇಂಥದೊಂದು ಪರಿಶೀಲನೆಯ ಪ್ರಯತ್ನ ಈ ಸಂಚಿಕೆಯಲ್ಲಿದೆ. ವಿಮರ್ಶೆಯನ್ನು ಅಭಿವ್ಯಕ್ತಿಯ ಗಂಭೀರ ಮಾಧ್ಯಮವನ್ನಾಗಿ ಪರಿಗಣಿಸಿರುವ ಸುರೇಶ್ ನಾಗಲಮಡಿಕೆ, ಇತ್ತೀಚಿನ ಕಥೆಗಾರರನ್ನು ಒಟ್ಟಾಗಿ ನೋಡುವ ಪ್ರಯತ್ನ ನಡೆಸಿದ್ದಾರೆ. ‘ಕಾಣ್ಕೆ-ಕಣ್ಕಟ್ಟು: ಹೊಸ ತಲೆಮಾರಿನ ಕಥನ’ ಬರಹದ ಮೊದಲ ಭಾಗ ಈ ಸಂಚಿಕೆಯಲ್ಲಿದೆ. ಸಮಕಾಲೀನ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಬೀಜರೂಪದಲ್ಲಿರುವ ಈ ಬರಹ, ‘ಮಯೂರ’ದ ಓದುಗರಿಗೆ ಇಷ್ಟವಾಗುತ್ತದೆನ್ನುವ ನಂಬಿಕೆ ನಮ್ಮದು.

ಹೊಸ ಕ್ಯಾಲೆಂಡರ್ ವರ್ಷದ ಮೊದಲ ಸಂಚಿಕೆಯನ್ನು ಎಂದಿನಂತೆ ಕಥೆ, ಕವಿತೆ, ಪ್ರಬಂಧ, ವಿಮರ್ಶೆ, ಅಂಕಣ ಬರಹಗಳ ಮೂಲಕ ವೈವಿಧ್ಯದಿಂದ ಕೂಡಿರುವಂತೆ ರೂಪಿಸಲು ಪ್ರಯತ್ನಿಸಿದ್ದೇವೆ. ಹೊಸ ವರ್ಷವೆನ್ನುವುದು ಹೊಸ ಕನಸುಗಳ ಬಿತ್ತ, ಹೊಸ ಪ್ರಯತ್ನಗಳಿಗೆ ಪ್ರೇರಣೆ. ‘ನಿಚ್ಚಂ ಪೊಸತು’ ಎನ್ನುವುದು ನಮ್ಮ ನಂಬಿಕೆ. ಮುಂದಿನ ಸಂಚಿಕೆಗಳು ಮತ್ತಷ್ಟು ವೈವಿಧ್ಯಮಯವಾಗಿರಲಿವೆ ಎನ್ನುವ ಕನಸಿನ ಗರಿಯೊಂದನ್ನು ಮಯೂರ ಬಳಗ ಓದುಗರಿಗೆ ದಾಟಿಸುತ್ತಿದೆ.

ಎಲ್ಲ ಓದುಗರಿಗೆ ಹೊಸ ವರ್ಷದ ಶುಭಾಶಯಗಳು.

**ಮಯೂರ ಬಳಗ**

editormy@mayura.co.in